ಮೈಸೂರು ಮಿನರಲ್ಸ್ ಸಂಸ್ಥೆಯು 1966ನೇ ಇಸವಿಯ ಮೇ ತಿಂಗಳಿನಿಂದ ಪ್ರಾರಂಭಗೊಂಡಿತು.

2. ಸರ್ಕಾರವು ಷೇರು ಬಂಡವಾಳದ ರೂಪದಲ್ಲಿ 55-00 ಲಕ್ಷ ರೂ.ಗಳನ್ನು ಈ ಸಂಸ್ಥೆಯಲ್ಲಿ ತೊಡಗಿಸಿದೆ.

3. ಈ ಸಂಸ್ಥೆಯ ಲಾಭದ ವಿವರ ಈ ಕೆಳಗಿನಂತಿದೆ.

ವರ್ಷ	ತೆರಿಗೆ ನಂತರದ ಲಾಭ (ಅಕ್ಷರಗಳಲ್ಲಿ)
1980-81	49.33
1981-82	127.28
1982-83	45.43
1983-84	49.08
1984-85	73.24
1985-86	47.69
1986-87	1.66
1987-88	49.70
1988-89	36.75
1989-90	53.55

ರಾಜ್ಯದಲ್ಲಿ ರೋಗಗ್ರಸ್ತವಾಗಿರುವ ಸಣ್ಣ ಕೈಗಾರಿಕೆಗಳು

2014 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಎಷ್ಟು ರೋಗಗ್ರಸ್ಥವಾಗಿ ನಿಂತಿವೆ?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) 1,15,451

ಆ) 708.

ರಾಜ್ಯದಲ್ಲಿ ಕುಟುಂಬ ಕಲ್ಯಾಣ ಯೋಜನೆಯ ಪ್ರಗತಿ

2015 - ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಆರೋಗ್ಯ ಮತ್ತು ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರ್ಷ ಕುಟುಂಬ ಕಲ್ಯಾಣ ಯೋಜನೆಯ ಪ್ರಗತಿ ಏನು?

ಆ) ವಿವಿಧ ರೀತಿಯಲ್ಲಿ ಅಳವಡಿಸಿಕೊಂಡಿರುವ ವಿವರಗಳನ್ನು ಕೊಡುವುದು

ಇ) ಈ ಯೋಜನೆಯ ಅಡಿಯಲ್ಲಿ ಬರುವ ಫಲಾನುಭವಿಗಳಿಗೆ ಕೊಡುತ್ತಿರುವ ಪ್ರೋತ್ಸಾಹ ಧನವನ್ನು ರದ್ದು ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಈ ವರ್ಷ ಜುಲೈ 91ರವರೆಗಿನ ಪ್ರಗತಿ

1) ಶಸ್ತ್ರ ಚಿಕಿತ್ಸೆ 83254

2) ವಂಕಿ 66772

3) ನಿರೋಧ್ ಉಪಯೋಗಿಸುವವರು 222685

4) ನುಂಗುವ ಗುಳಿಗೆ ಉಪಯೋಗಿಸುವವರು 72073

ಆ) ಜುಲೈ ಅಂತ್ಯದವರೆಗೆ

		ಗುರಿ	ಸಾಧನೆ	ಶೇಕಡ (ವರ್ಷದವರೆಗೆ)	ಶೇಕಡ ಜುಲೈಯವರೆಗೆ
1)	ಶಸ್ತ್ರ ಚಿಕಿತ್ಸೆ	34,5000	93254	27.0	104.0
2)	ವಂಕಿ	275000	66772	24.0	93.4
3)	ನಿರೋಧ್	270000	222685	82.5	92.8
4)	ನುಂಗುವ ಗುಳಿಗೆ	80000	72073	90.0	94.3

ಇ) -ಇಲ್ಲ-

ಅಂಗವಿಕಲರ ಸಮಗ್ರ ಸಮೀಕ್ಷೆ

2023 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಅಂಗವಿಕಲರ ಬಗ್ಗೆ ಒಂದು ಸಮಗ್ರ ಸಮೀಕ್ಷೆಯನ್ನು ನಡೆಸಿದೆಯೇ?

ಆ) ಅಂಗವಿಕಲರಿಗೆ ಸರ್ಕಾರದ ನಾನಾ ಇಲಾಖೆಗಳಲ್ಲಿ ಎಷ್ಟು ಹುದ್ದೆಯನ್ನು ಮೀಸಲಿರಿಸಿದೆ?

ಇ) ಅಂಗವಿಕಲರಿಗೆ ನೀಡುವ ಮೀಸಲು ಪದ್ಧತಿ ಎಲ್ಲಾ ಇಲಾಖೆಗಳಿಗೂ ಅನ್ವಯಿಸುತ್ತದೆಯೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಸಮೀಕ್ಷೆಯನ್ನು ನಡೆಸಲಾಗುತ್ತಿದೆ.

ಆ) ಸಿ ಮತ್ತು ಡಿ ಹುದ್ದೆಗಳಲ್ಲಿ ಪ್ರತಿಶತ 4ರಷ್ಟು ಮೀಸಲಿರಿಸಿದೆ.

ಇ) ಹೌದು.

ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿ

2024 - ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ) : ಮಾನ್ಯ ಭಾರಿ ಮತ್ತು ಉದ್ಯಮ ಕೈಗಾರಿಕೆ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿಯನ್ನು ರೂಪಿಸಲಾಗಿದೆಯೇ

ಆ) ಹಾಗಿದ್ದಲ್ಲಿ, ಹೊಸ ಕೈಗಾರಿಕೆಗಳ ನೀತಿಗಳು ಯಾವುವು?

ಶ್ರೀಮತಿ ಮನೋರಮಾ ಮಧ್ವರಾಜ್ (ಮಧ್ಯಮ ಮತ್ತು ಭಾರಿ ಪ್ರಮಾಣದ ಕೈಗಾರಿಕಾ ಸಚಿವರು)

ಅ) ರಾಜ್ಯದಲ್ಲಿ 1990ರಲ್ಲಿ ಹೊರಡಿಸಿದ ಕೈಗಾರಿಕಾ ನೀತಿಯ ಆದೇಶವನ್ನು ಹೊರತಾಗಿ, ಯಾವ ಹೊಸ ಕೈಗಾರಿಕಾ ನೀತಿಯನ್ನು ರೂಪಿಸಿಲ್ಲ.

ಆ) ಉದ್ಭವಿಸುವುದಿಲ್ಲ.